ಸಂಬಂಧಿಸಿದ ಇಲಾಖೆಗಳಿಗೆ ಸಚಿವ ಸಂಪುಟ ಉಪ ಸಮಿತಿಯು ಸೂಚನೆ ನೀಡಿರುತ್ತದೆ

ಈ) ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಯಲ್ಲಿ ಕೆಲವು ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಹಲವಾರು ತಾಂತ್ರಿಕ ಕಾರಣಗಳಿಂದಾಗಿ ವಿಳಂಬವಾಗಿದ್ದು, ಈಗ ಭರ್ತಿ ಕಾರ್ಯವು ನಡೆಯುತ್ತಿದೆ ಭರ್ತಿ ಮಾಡದೆ ಇರುವ ಯಾವುದೇ ಇಲಾಖೆಯು ಇಲ್ಲದಿರುವುದರಿಂದ ಕ್ರಮದ ಪ್ರಶ್ನೆ ಉದ್ಭವಿಸುವುದಿಲ್ಲ

573(473) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೆಚ್‌ಐವಿ/ಏಡ್ಸ್ ಸೋಂಕಿತ ರೋಗಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು) ?

ಆ) ಇಂತಹ ಮಾರಕ ರೋಗಗಳನ್ನು ತಡೆಯಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಇ) ಇಂತಹ ರೋಗಿಗಳಿಗೆ ಯಾವ ರೂಪದ ಚಿಕಿತ್ಸೆ ಶುಶ್ರೂಷೆ ನೀಡಲಾಗುವುದು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 1987 ರಿಂದ ಡಿಸೆಂಬರ್ 2006 ರವರೆಗೆ ಹೆಚ್‌ಐವಿ/ಏಡ್ಸ್ ಸೋಂಕಿತ ರೋಗಿಗಳ ಸಂಖ್ಯೆ 10695 ಜಿಲ್ಲಾವಾರು ವಿವರವನ್ನು ನೀಡಲಾಗಿದೆ (ಅನುಬಂಧ–1)

ಆ) ಕೈಗೊಂಡ ಕ್ರಮಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ

ಇ)1 ಹನ್ನೆರಡು ಏ ಆರ್ ಟಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಅವುಗಳಲ್ಲಿ ಏಡ್ಸ್ ರೋಗಗಳಿಗೆ ಆಂಟಿ ರಿಟ್ರೋ ವೈರಲ್ ಚಿಕಿತ್ಸೆ ಮತ್ತು ರಕ್ತದಲ್ಲಿನ ಸಿ ಡಿ 4 ಕಣಗಳ ಪರೀಕ್ಷೆ ಸೌಲಭ್ಯ ಒದಗಿಸಲಾಗುತ್ತಿದೆ

2 ಒಂಭತ್ತು ಆರೈಕೆ ಮತ್ತು ಬೆಂಬಲ ನೀಡುವ ಕೇಂದ್ರಗಳಲ್ಲಿ ಏಡ್ಸ್ ರೋಗಿಗಳಿಗೆ ಆರೈಕೆ ಮತ್ತು ನೈತಿಕ ಬೆಂಬಲ ನೀಡಲಾಗುತ್ತಿದೆ

3 ಹೆಚ್‌ಐವಿ ಸೋಂಕಿತನೊಂದಿಗೆ ಜೀವಿಸುತ್ತಿರುವ ಮಕ್ಕಳಿಗಾಗಿ (15 ವರ್ಷಕ್ಕಿಂತ ಕೆಳಗಿನವರು) ಪ್ರಥಮ ಬಾರಿಗೆ ಬೆಂಗಳೂರಿನ

ಬೌರಿಂಗ್ ಆಸ್ಪತ್ರೆ ಹಾಗೂ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಎಆರ್‌ಟಿ ಚಿಕಿತ್ಸೆ ಪ್ರಾರಂಭಿಸಲಾಗಿದೆ ಬರುವ ದಿನಗಳಲ್ಲಿ ಎಲ್ಲಾ ಎ ಆರ್ ಟಿ ಕೇಂದ್ರಗಳಲ್ಲೂ ಈ ಸೇವೆಯನ್ನು ವಿಸ್ತರಿಸಲಾಗುವುದು ನ್ಯಾಕೋ ಮುಖಾಂತರ ಕ್ಲಿಂಟನ್ ಫೌಂಡೇಷನ್‌ನವರು ಔಷಧಿಗಳನ್ನು ಉಚಿತವಾಗಿ ನೀಡಿದ್ದಾರೆ

4 ಹಾಗೆಯೇ ವಿಭಾಗೀಯ ಮಟ್ಟದಲ್ಲಿ ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಸೋಂಕಿತ ಮಕ್ಕಳಿಗಾಗಿ ಆರೈಕೆ ಮತ್ತು ಬೆಂಬಲ (ಎ ಆರ್ ಟಿ ಚಿಕಿತ್ಸೆ) ನೀಡುವ ಸೆಂಟರ್ ಆಫ್ ಎಕ್ಸೆಲೆನ್ಸ್ ಸಂಸ್ಥೆಯನ್ನು ತೆರೆಯಲು ನ್ಯಾಕೋದಿಂದ ಮಂಜೂರಾತಿ ದೊರೆತಿದೆ

ಏಡ್ಸ್ ಕಾಯಿಲೆಯಿಂದ ಬಳಲುತ್ತಿರುವವರ ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆಗಳು	1987ರಿಂದ ಡಿಸೆಂಬರ್ 2006ರ ವರೆಗೆ ಏಡ್ಸ್ ಕಾಯಿಲೆಯಿಂದ ಬಳಲುತ್ತಿರುವವರ ಸಂಖ್ಯೆ
	ಬೆಂಗಳೂರು ವಿಭಾಗ	
1	ಬೆಂಗಳೂರು (ನಗರ)	1485
2	ಬೆಂಗಳೂರು (ಗ್ರಾಮಾಂತರ)	86
3	ತುಮಕೂರು	109
4	ಶಿವಮೊಗ್ಗ	155
5	ಚಿತ್ರದುರ್ಗ	47
6	ದಾವಣಗೆರೆ	1013
7	ಕೋಲಾರ	72

	ಮೈಸೂರು ವಿಭಾಗ	
8	ಮೈಸೂರು	282
9	ಚಾಮರಾಜನಗರ	11
10	ಮಂಡ್ಯ	166
11	ಮಂಗಳೂರು	1688
12	ಉಡುಪಿ	1807
13	ಮಡಿಕೇರಿ	11
14	ಚಿಕ್ಕಮಗಳೂರು	102
15	ಹಾಸನ	34
	ಬೆಳಗಾಂ ವಿಭಾಗ	
16	ಬೆಳಗಾಂ	1626
17	ಬಿಜಾಪುರ	24
18	ಬಾಗಲಕೋಟೆ	48
19	ಧಾರವಾಡ	671
20	ಹಾವೇರಿ	75
21	ಗದಗ್	65
22	ಕಾರವಾರ	161
	ಗುಲ್ಬರ್ಗಾ ವಿಭಾಗ	
23	ಗುಲ್ಬರ್ಗಾ	505
24	ರಾಯಚೂರು	65
25	ಬೀದರ್	20

26	ಬಳ್ಳಾರಿ	324
27	ಕೊಪ್ಪಳ	43
	ಒಟ್ಟು	**10695**

ಏಡ್ಸ್ ಕಾಯಿಲೆಯನ್ನು ತಡೆಗಟ್ಟಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿ

- ರಾಜ್ಯದಲ್ಲಿ HIV/AIDS ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿಯ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಮೊದಲಿನಿಂದ ಹಮ್ಮಿಕೊಂಡಿದೆ KSAPS ಜೊತೆಗೆ ಹಲವು ಸ್ವಯಂಸೇವಾ ಸಂಸ್ಥೆಗಳು ಹಾಗೂ ಇತರೆ ಇಲಾಖೆಗಳು ಒಗ್ಗೂಡಿ HIV/AIDS ನಿಯಂತ್ರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ

- ಸುಮಾರು 95 ಸ್ವಯಂ ಸೇವಾ ಸಂಸ್ಥೆ (ಎನ್‌ಜಿಒ)ಗಳು ಪಿಪಿಟಿಸಿಟಿ, ಉದ್ದೇಶಿತ ಕಾರ್ಯಕ್ರಮ (Targeted intervenions) ಹಾಗೂ ದೂರವಾಣಿ ಸಮಾಲೋಚನೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸಹಭಾಗಿಗಳಾಗಿದ್ದಾರೆ ಇವರು ಸೇವೆಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಇವರ ಸೇವೆಗಳನ್ನು ಬಳಸಿಕೊಳ್ಳಲಾಗುವುದು

- ಹೆಚ್‌ಐವಿ ತಡೆಗಟ್ಟುವ ನಿಟ್ಟಿನಲ್ಲಿ ವಿಶ್ವಬ್ಯಾಂಕ್, UNAIDS, USAID, ಬಿಲ್‌ಗೇಟ್, ಕ್ಲಿಂಟನ್ ಫೌಂಡೇಷನ್ ಹಾಗೂ ಇತರೆ ಸಂಸ್ಥೆಗಳೂ ಸಹ ಸಹಕಾರ ನೀಡುತ್ತಿದ್ದಾರೆ

- ಈ ಕಾರ್ಯಕ್ರಮ ಯಶಸ್ಸು ಕಾಣಲು ಸೇವಾ ಸೌಲಭ್ಯಗಳನ್ನು ಹೆಚ್ಚಿಸಬೇಕಾಗಿದೆ ಈ ನಿಟ್ಟಿನಲ್ಲಿ ನಿಯಂತ್ರಣ ಕ್ರಮಗಳಾಗಿ ಈಗಾಗಲೇ ವಿಸಿಟಿಸಿ 61 ಕೇಂದ್ರಗಳು, ಸೋಂಕಿತ ತಾಯಿಯಿಂದ ಮಗುವಿಗೆ ಹೆಚ್‌ಐವಿ ಸೋಂಕು ತಡೆಗಟ್ಟಲು ಪಿಪಿಟಿಸಿಟಿ 82 ಕೇಂದ್ರಗಳು, ಸಂಯುಕ್ತ ವಿಸಿಟಿಸಿ/ ಪಿಪಿಟಿಸಿಟಿ 194 ಕೇಂದ್ರಗಳು, ಲೈಂಗಿಕ ಸಂಪರ್ಕ ಸೋಂಕನ್ನು ತಡೆಗಟ್ಟಲು ಎಸ್ ಟಿ ಡಿ 206 ಕ್ಲಿನಿಕ್‌ಗಳು, ಸೋಂಕಿತರ ಬೆಂಬಲ ಹಾಗೂ ಆರೈಕೆ ಮಾಡಲು ಎ ಆರ್ ಟಿ 12 ಕೇಂದ್ರಗಳು ಹಾಗೂ ಹೆಚ್‌ಐವಿ/ಟಿಬಿ

33 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಇವುಗಳನ್ನು ಜಿಲ್ಲಾ ಮಟ್ಟದಲ್ಲಿ ಮಾತ್ರವಲ್ಲದೇ ಸಿಹೆಚ್‌ಸಿ ಹಾಗೂ ಪಿಹೆಚ್‌ಸಿ ಮಟ್ಟಕ್ಕೂ ವಿಸ್ತರಿಸಲಾಗಿದೆ

- ಹಾಗೆಯೇ ಪೊಲೀಸ್ ಸಿಬ್ಬಂದಿಗೆ, ಅಂಗನವಾಡಿ ಕಾರ್ಯಕರ್ತರಿಗೆ, ವೈದ್ಯರಿಗೆ, ದಾದಿಯರಿಗೆ ವಿವಿಧ ಮಟ್ಟದಲ್ಲಿ ತರಬೇತಿಗಳನ್ನು ನೀಡಲಾಗುತ್ತಿದೆ
- HIV/AIDS ಬಾದಿತರ ಆರೈಕೆ, ಜೀವನಮಟ್ಟ ಸುಧಾರಿಸಲು ಹಾಗೂ ಅವರ ಜೀವಿತದ ಅವಧಿ ಹೆಚ್ಚಿಸುವುದಕ್ಕಾಗಿ ಕಳೆದ ಆಗಸ್ಟ್‌ನಲ್ಲಿ 8 ನೂತನ ಎ ಆರ್ ಟಿ ಕೇಂದ್ರಗಳನ್ನು ರಾಜ್ಯದಲ್ಲಿ ತೆರೆಯಲಾಗಿದೆ ಈಗ ರಾಜ್ಯದಲ್ಲಿ ಏಡ್ಸ್ ಬಾದಿತರಿಗೆ ಚಿಕಿತ್ಸೆ ನೀಡಲು ಒಟ್ಟು 12 ಕೇಂದ್ರಗಳು ಕಾರ್ಯನಿರ್ವಹಿಸುತ್ತಿದೆ ಈ ಕೇಂದ್ರಗಳ ಆರಂಭ HIV/AIDS ಬಾದಿತರ ಬದುಕಿನಲ್ಲಿ ಆಶಾಕಿರಣವಾಗಲಿದೆ ನ್ಯಾಕೊದಿಂದ ಇನ್ನು ನಾಲ್ಕು ಸಿಡಿ4 ಯಂತ್ರಗಳನ್ನು ಸರಬರಾಜು ಮಾಡುತ್ತಿದ್ದಾರೆ
- ಅದೇ ರೀತಿಯಲ್ಲಿ ಹೆಚ್‌ಐವಿ ಸೋಂಕಿನೊಂದಿಗೆ ಜೀವಿಸುತ್ತಿರುವ ಮಕ್ಕಳಿಗಾಗಿ (15 ವರ್ಷಕ್ಕಿಂತ ಕೆಳಗಿನವರು) ಪ್ರಥಮ ಬಾರಿಗೆ ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಹಾಗೂ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಎಆರ್‌ಟಿ ಚಿಕಿತ್ಸೆ ಪ್ರಾರಂಭಿಸಲಾಗಿದೆ ಬರುವ ದಿನಗಳಲ್ಲಿ ಎಲ್ಲಾ ಎಆರ್‌ಟಿ ಕೇಂದ್ರಗಳಲ್ಲೂ ಈ ಸೇವೆಯನ್ನು ವಿಸ್ತರಿಸಲಾಗುವುದು ನ್ಯಾಕೋ ಮುಖಾಂತರ ಕ್ಲಿಂಟನ್ ಫೌಂಡೇಷನ್‌ನವರು ಔಷಧಿಗಳನ್ನು ಉಚಿತವಾಗಿ ನೀಡಿದ್ದಾರೆ ಯುನಿಸೆಫ್‌ನವರು ವಿವಿಧ ಹಂತಗಳಲ್ಲಿ ತರಬೇತಿ ನೀಡಲು ಸಹಾಯ ಮಾಡುತ್ತಿದ್ದಾರೆ
- ಹಾಗೆಯೇ ವಿಭಾಗೀಯ ಮಟ್ಟದಲ್ಲಿ ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಸೋಂಕಿತ ಮಕ್ಕಳಿಗಾಗಿ ಆರೈಕೆ ಮತ್ತು ಬೆಂಬಲ (ಎ ಆರ್ ಟಿ ಚಿಕಿತ್ಸೆ) ನೀಡುವ ಸೆಂಟರ್ ಆಫ್ ಎಕ್ಸೆಲೆನ್ಸ್ ಸಂಸ್ಥೆಯನ್ನು ತೆರೆಯಲು ನ್ಯಾಕೋದಿಂದ ಮಂಜೂರಾತಿ ದೊರೆತಿದೆ
- ಇವುಗಳ ಜೊತೆಗೆ ಸುರಕ್ಷಿತ ಕ್ರಮವಾಗಿ ಕಾಂಡೋಮ್ ಬಳಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಕಾಂಡೋಮ್ ಬಳಕೆ ಕೇವಲ ಸಂತಾನ ನಿಯಂತ್ರಣ ಸಾಧ್ನವಾಗಿರದೇ HIV/AIDS ನಿಯಂತ್ರಣ ಸಾಧ್ನವಾಗಿ ಉಪಯೋಗಿಸಬಹುದೆಂದು ಜನತೆಯಲ್ಲಿ ಅರಿವು ಮೂಡಿಸಲಾಗುತ್ತಿದೆ ಹಾಗೆಯೇ ನಿರೋಧ್‌ಗಳನ್ನು ವಿತರಿಸಲಾಗುತ್ತಿದೆ

♦ "ಅರಿವೇ ಗುರು" ಎಂಬಂತೆ, ಅರಿವು ಹಾಗೂ ಸೂಕ್ತ ಎಚ್ಚರಿಕೆಯೊಂದೇ ಏಡ್ಸ್‌ನ್ನು ತಡೆಗಟ್ಟಬಲ್ಲದು ಎಂಬ ಉದ್ದೇಶದಿಂದ ರಾಜ್ಯಾದ್ಯಾಂತ ವಿವಿಧ ಮಾಧ್ಯಮಗಳ ಮೂಲಕ HIV/AIDS ಕುರಿತ ಜಾಗೃತಿ ಕಾರ್ಯಕ್ರಮಗಳನ್ನು ಸಹ ತುಂಬಾ ತೀವ್ರವಾಗಿ ಕೈಗೊಳ್ಳಲಾಗಿದೆ

574(474) ಶ್ರೀ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳೆಷ್ಟು? (ವಿವರ ನೀಡುವುದು)

ಆ) ಈ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮಗಳೇನು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಸಂಖ್ಯೆ, 781 (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಆ) ಖಾಯಂ ಆಗಿ 500 ವೈದ್ಯಾಧಿಕಾರಿಗಳನ್ನು ಎರಡು ಹಂತಗಳಲ್ಲಿ ವಿಶೇಷ ನೇಮಕಾತಿ ನಿಯಮಗಳ ಅಡಿ ಭರ್ತಿ ಮಾಡಲು ಅನುಮತಿ ನೀಡಿದ್ದು, ಇದರಲ್ಲಿ ಮೊದಲ ಹಂತವಾಗಿ 250 ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ ಆಯ್ಕೆ ಪಟ್ಟಿ ಪ್ರಕಟಿಸಿದ ನಂತರ 2ನೇ ಹಂತದಲ್ಲಿ 250 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು

———— THE SANCTIONED STRENGTH OF PROGRAMME OFFICERS, TALUK HEALTH OFFICERS SPECIALIST AND GDMO'S AS ON 12.12.06

Sl No	District	Sanctioned	Working	Vacant
	BANGALORE DIVISION			
1	BANGALORE URBAN	290	278	12
2	BANGALORE RURAL	216	207	9
3	KOLAR	280	240	40